ಇದಕ್ಕೆಲ್ಲಾ ಕಳಸವಿಟ್ಟಂತೆ ಒಮ್ಮೆ ಮಾರಾಟ ಮಾಡಿದ ಹಣದ ಲೆಕ್ಕ ಮತ್ತು ಮನೆಗೆ ತಂದ ಹಣದಲ್ಲಿ ಬಹಳ ವ್ಯತ್ಯಾಸವಾಯಿತು. ಆ ಹಣ ಎಲ್ಲಿ ಹೋಯಿತೆಂಬುದೇ ಶ್ರೀಕಂಠನಿಗೆ ತಿಳಿಯಲಿಲ್ಲ. ಅದಾದ ನಂತರ ಇದರಲ್ಲೂ ಆಸಕ್ತಿ ಕಳೆದುಕೊಂಡ ಶ್ರೀಕಂಠನು ಮತ್ತೆ ಬೇಸಾಯದ ಕೆಲಸ ಮಾತ್ರ ನೋಡಿಕೊಳ್ಳತೊಡಗಿದ. ಹಾಗಾಗಿ ಮತ್ತೆ ನಂಜುಂಡನೇ ಹಣಕಾಸಿನ ವ್ಯವಹಾರ ನೋಡಿಕೊಳ್ಳಬೇಕಾಯಿತು.

ಹೀಗೆ ಎಲ್ಲವೂ ಸರಿಯೋಯ್ತು, ಸಂಸಾರ ಸುಸೂತ್ರವಾಗಿ ನಡೆಯುತ್ತಿದೆ ಎಂದು ಎಣಿಸುತ್ತಿರುವಾಗಲೇ, ಕುಟುಂಬದಲ್ಲಿ ನಡೆದ ಒಂದು ಘಟನೆಯು ಶ್ರೀಕಂಠನ ಬದುಕು ವಿಚಿತ್ರ ತಿರುವು ಪಡೆದುಕೊಳ್ಳಲು ಕಾರಣವಾಯಿತು. ಆ ದಿನ ಶ್ರೀಕಂಠನು ಹೊಲದಲ್ಲಿ ಕೆಲಸ ಮುಗಿಸಿಕೊಂಡು ಮನೆಗೆ ಬಂದಾಗ, ಹಜಾರದಲ್ಲಿ ಅಳುತ್ತಾ ತನ್ನ ಮುದ್ದಿನ ಮಗಳು ಗೌರಿ ಎದುರಾದಳು. ಅವಳ ತಲೆಗೆ ಹಾಕಿದ್ದ ಸಣ್ಣ ಬ್ಯಾಂಡೇಜ್ ನೋಡಿ ಶ್ರೀಕಂಠನ ಎದೆ ಧಸಕ್ಕೆಂದಿತು.

ಅಪ್ಪನನ್ನು ನೋಡುತ್ತಲೇ ಗೌರಿಯು ಧ್ವನಿ ಎತ್ತರಿಸಿ ಜೋರಾಗಿ ಅಳಲು ಶುರುಮಾಡಿದಳು. ಮಗಳ ಹಣೆಯ ಮೇಲೆ ಬ್ಯಾಂಡೇಜ್ ಮತ್ತು ಅವಳ ಅಳು ಎರಡೂ ಶ್ರೀಕಂಠನ ಎದೆಯನ್ನು ಕಲಕಿದವು. ಗಾಬರಿಯಾಗಿ ಮಗಳನ್ನು ಎತ್ತಿಕೊಂಡು, "ಏನಾಯ್ತು ಗೌರಮ್ಮ! ಏನಾಯ್ತು ಬಂಗಾರ?" ಎಂದು ಮಗಳ ಕಣ್ಣೀರು ಒರೆಸುತ್ತಾ, ಸಮಾಧಾನ ಮಾಡುತ್ತಾ ಹೆಂಡತಿಯ ಕಡೆ ಪ್ರಶ್ನಾರ್ಥಕವಾಗಿ ನೋಡಿದ. ಆಟವಾಡುವಾಗ ಕೆಳಗೆ ಬಿದ್ದು ಹಣೆಗೆ ಸಣ್ಣ ಗಾಯವಾಯಿತೆಂದೂ, ಹೆದರಿಕೊಳ್ಳುವಂತದ್ದೇನೂ ಇಲ್ಲವೆಂದು ನುಡಿದಳು. ಅಷ್ಟೇ ತಾನೆ ಎಂದು ನಿಟ್ಟುಸಿರುಬಿಟ್ಟು ಮಗಳಿಗೆ ಸಮಾಧಾನ ಮಾಡಲು ಚಾಕೋಲೇಟ್ ಕೊಡಿಸಲು ಶೆಟ್ಟರ ಅಂಗಡಿಯ ಹತ್ತಿರ ಅವಳನ್ನು ಎತ್ತಿಕೊಂಡು ಬಂದ. ಚಾಕೋಲೇಟ್ ಕೊಡುತ್ತಲೇ ಅವಳ ಅಳುವೂ ಕೂಡ ನಿಂತಿತು. ಆಟ ಆಡುವಾಗ, ಓಡುವಾಗ ಜೋಪಾನವಾಗಿ ನಿಧಾನವಾಗಿ ಆಡಬೇಕು ಎಂದು ಮಗಳಿಗೆ ಬುದ್ಧಿ ಹೇಳತೊಡಗಿದ. ಆಗ ಗೌರಿ, "ನಾನು ಹುಷಾರಾಗಿಯೇ ಆಡ್ತಾಯಿದ್ದೆ. ಅಕ್ಕ ನನ್ನ ತಳ್ಳಿಬಿಟ್ಲು" ಎಂದಳು. "ಯಾಕೆ ತಳ್ಳಿದ್ಲು!" ಎಂದ ಅಪ್ಪನ ಮಾತಿಗೆ

